| | | |
|---|---|---|
| ಓ ಎಸ್ | 79/2013 | ಪಿ.ಡಬ್ಲ್ಯೂಃ 1 |

ಇಂದು ದಿಃ 8/2/2021 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ-

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು 20 ವರ್ಷದ ಹಿಂದಿನಿಂದಲೂ ಅಂಗನವಾಡಿಯಲ್ಲಿ ಟೀಚರ್ ಆಗಿ ಕೆಲಸ ಮಾಡುತ್ತಿದ್ದೇನೆ ಎಂದರೆ ನಿಜ. ಮಡುವಿನಹಳ್ಳಿ ಗ್ರಾಮದಲ್ಲಿ ಆರೀತಿ ನಾನು ಕೆಲಸ ಮಾಡುತ್ತಿರುವುದು ಎಂದರೆ ನಿಜ. ಮಕ್ಕಳು ಜನಿಸಿದಾಗ ಪ್ರಮಾಣಪತ್ರಗಳನ್ನು ಕೊಡಿಸುವುದು, ಜನರಿಗೆ ಆಧಾರ್ ಕಾರ್ಡ್ ಮಾಡಿಸಿ ಕೊಡಿಸುವುದು , ಮತದಾರರ ಯಾದಿಯಲ್ಲಿ ಹೆಸರು ಸೇರಿಸುವುದು ಮುಂತಾದ್ದು ನಮ್ಮ ಕೆಲಸ ಎಂದರೆ ಆಧಾರ್ ಕಾರ್ಡ್ ಮಾಡಿಸುವುದು ನಮ್ಮ ಕೆಲಸವಲ್ಲ ಬೇರೆ ಸೂಚಿಸಿರುವ ಕೆಲಸಗಳನ್ನು ನಾವು ಮಾಡುತ್ತೇವೆ ಎಂದು ನುಡಿಯುತ್ತೇನೆ. ಶಂಭುಲಿಂಗಪ್ಪ ರವರು ಬದುಕಿದ್ದಾರೆಯೇ ಎಂದು ಕೇಳಿದರೆ ಅವರು ಯಾರು ಎಂದು ಗೊತ್ತಿಲ್ಲ ಎಂದು ನುಡಿಯುತ್ತೇನೆ. ನಮ್ಮ ಊರಿನಿಂದ ಆಕಳ ಗ್ರಾಮಕ್ಕೆ ಎಷ್ಟು ದೂರ ಎಂದು ಗೊತ್ತಿಲ್ಲ. ಆಕಳ ಗ್ರಾಮಕ್ಕೆ ನಾನು ಎಂದೂ ಹೋಗಿಲ್ಲ. ಆಕಳ ಎಂಬ ಹೆಸರಿನ ಊರು ಇದೆ ಎಂದು ನನಗೆ ಗೊತ್ತಿಲ್ಲ. ಆ ಊರು ಕೂಡ ನನಗೆ ಗೊತ್ತು ಹಾಗು ಅಲ್ಲಿರುವ ಶಂಭುಲಿಂಗಪ್ಪ ರವರು ಕೂಡ ಗೊತ್ತು ಎಂದರೆ ಸರಿಯಲ್ಲ. ನನ್ನ ತಾಯಿ ಶಂಭುಲಿಂಗಪ್ಪ ರವರಿಂದ ಜೀವನಾಂಶ ಕೇಳಿದಾಗ ಹಾಗು ಮಕ್ಕಳಿಗೆ ಆಸ್ತಿಯನ್ನು ಕೇಳಿದಾಗ ಶಂಭುಲಿಂಗಪ್ಪ ರವರು ಕರಿಶೆಟ್ಟಿ ರವರಿಗೆ ಜಮೀನು ಮಾರಾಟ ಮಾಡಿದರು ಎಂದರೆ ಸರಿಯಲ್ಲ. ಸದರಿ ಸಮಯ ಅಂದರೆ 20 ವರ್ಷಗಳ ಹಿಂದೆ ನನ್ನ ತಾಯಿ ಜೊತೆ ಶಂಭುಲಿಂಗಪ್ಪ ರವರ ಬಳಿ ನಾನು ಕೂಡ ಹೋಗಿದ್ದೆ ಎಂದರೆ ಸರಿಯಲ್ಲ. ಶಂಭುಲಿಂಗಪ್ಪ ಆಸ್ತಿಯನ್ನು ಮಾರಾಟ ಮಾಡಿದ್ದು ಗೊತ್ತಾದ ನಂತರ ನನ್ನ ತಾಯಿ ಚೆನ್ನಬುದ್ದಿರವರ ಜೊತೆ ಮಡುವಿನ ಹಳ್ಳಿಯಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ಆರೀತಿ ಶಂಭುಲಿಂಗಪ್ಪ ರವರ ಪತ್ನಿ ಚೆನ್ನಬುದ್ದಿ ರವರ ಜೊತೆ ವಾಸವಿರುವುದು ತಪ್ಪು ಎಂದು ಮಡುವಿನ ಹಳ್ಳಿ ಊರಿನವರು ಬಹಿಷ್ಕಾರ ಹಾಕಿದ್ದರು

ಎಂದರೆ ಸರಿಯಲ್ಲ. ಮಡುವಿನಹಳ್ಳಿ ಗ್ರಾಮದಲ್ಲಿ ಚೆನ್ನಬುದ್ದಿ ಎಂಬ ಹೆಸರಿನ ವ್ಯಕ್ತಿ ಇದ್ದರು ಎಂದರೆ ಗೊತ್ತಿಲ್ಲ. ಮಹದೇಶ್ವರ ದೇವಸ್ಥಾನದಲ್ಲಿ ಮದುವೆಯಾಗಿತ್ತು ಎಂದು ನಾನು ಹೇಳಿರುವುದನ್ನು ರುಜುವಾತು ಪಡಿಸಲು ದೇವಸ್ಥಾನದಿಂದ ದಾಖಲಾತಿ ತಂದು ಹಾಜರುಪಡಿಸಿದ್ದೇನೆಯೇ ಎಂದು ಕೇಳಿದರೆ ನನ್ನ ತಂದೆ ತಾಯಿ ಮದುವೆಯ ಸಮಯ ನಾನು ಹುಟ್ಟಿರಲಿಲ್ಲವಾದ್ದರಿಂದ ಆರೀತಿ ದಾಖಲೆಗಳನ್ನು ನಾನು ಹೇಗೆ ತರಲಿ ಎಂದು ನುಡಿಯುತ್ತೇನೆ. ಸಾಮಾನ್ಯವಾಗಿ ದೇವಸ್ಥಾನದಲ್ಲಿ ಮದುವೆಯಾದರೆ ರಸೀದಿಯನ್ನು ಕೊಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಗೆ ಆರೀತಿ ರಸೀದಿ ಕೊಟ್ಟಿದ್ದರೆ ಎಂಬುದು ನನ್ನ ತಾಯಿಗೆ ಗೊತ್ತಿರಬಹುದೇ ಹೊರತು ನನಗೆ ಗೊತ್ತಿಲ್ಲ. ಈ ದಾವೆ ದಾಖಲಿಸುವಾಗ ನನ್ನ ತಾಯಿ ಜೀವಂತ ಇದ್ದರು. ಆರೀತಿ ರಸೀದಿ ನನ್ನ ತಾಯಿ ಬಳಿ ಇದೆಯೇ ಎಂದು ಕೇಳಲು ನನಗೆ ತೊಂದರೆ ಇರಲಿಲ್ಲ ಎಂದರೆ ನನ್ನ ತಂದೆ ಇರುವಾಗ ಆರೀತಿ ಯಾಕೆ ಕೇಳಬೇಕು ಎಂದು ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತೇನೆ. ನೀಲಕಂಠದೇವರು ನನ್ನ ತಾಯಿಯನ್ನು ಮದುವೆಯಾಗಿಲ್ಲ ಎಂದರೆ ಸರಿಯಲ್ಲ.

ನಾಗೇಂದ್ರಮ್ಮರವರು ನೀಲಕಂಠದೇವರನ್ನು ಕಾನೂನುಬದ್ಧವಾಗಿ ಮದುವೆಯಾಗಿದ್ದರು ಎಂದರೆ ನಮಗೇನುಗೊತ್ತು ಅವಾಗ ನಾನು ಹುಟ್ಟಿರಲೇಇಲ್ಲ ಹಾಗು ಕಾನೂನುಬದ್ಧವೇ ಎಂಬುದುಕೂಡ ಗೊತ್ತಿಲ್ಲ ಎಂದು ನುಡಿಯುತ್ತೇನೆ. ನಾಗೇಂದ್ರಮ್ಮನ ಮಕ್ಕಳ ಹೆಸರು ಗೊತ್ತು. ಆದರೆ ಅವರ ಯವಸ್ಸು ಮುಂತಾದ ವಿವರ ಗೊತ್ತಿಲ್ಲ. ನೀಲಕಂಠದೇವರು ಹಾಗು ನಾಗೇಂದ್ರಮ್ಮ ರವರ ಮಕ್ಕಳ ಹೆಸರು ಅಕ್ಕಮಹಾದೇವಿ, ಸುಮತಿ, ರೇಣುಕ, ಮಹದೇವಸ್ವಾಮಿ ಎಂದರೆ ನಾಗೇಂದ್ರಮ್ಮನ ಮಕ್ಕಳ ಹೆಸರು ಸರಿಇದೆ, ನೀಲಕಂಠದೇವರಿಗೆ ನಾಗಮ್ಮ ಹಾಗು ಮಂಜುಳ ಎಂಬ ಇಬ್ಬರು ಮಕ್ಕಳು ಇದ್ದಾರೆ ಎಂದು ನುಡಿಯುತ್ತೇನೆ. ದಾವೆ ಹಾಕಲು ಮಾಹಿತಿಯನ್ನು ಹೇಳಿದವರು ಯಾರು ಎಂದು ಕೇಳಿದರೆ ನಾವೇ ಎಂದು ನುಡಿಯುತ್ತೇನೆ. ಈ ದಾವೆಯಲ್ಲಿ ನಾವು ಹಾಜರುಪಡಿಸಿರುವ

ದಾಖಲೆಗಳ ಬಗ್ಗೆ ಮಾಹಿತಿ ಇದೆ. ಅವುಗಳನ್ನು ಲಾಯರ್ ಮೂಲಕ ಪಡೆದುಕೊಂಡಿದ್ದೆವು. 3 ನೇ ಪ್ರತಿವಾದಿಗೂ ನಾಗೇಂದ್ರಮ್ಮನಿಗೂ ಏನು ಸಂಬಂಧ ಎಂದು ಕೇಳಿದರೆ ಆಕೆ ನಾಗೇಂದ್ರಮ್ಮನ ಮಗಳು ಎಂದು ನುಡಿಯುತ್ತೇನೆ. ನಾಗೇಂದ್ರಮ್ಮಳಿಗೆ 3 ಹೆಣ್ಣು ಹಾಗು 1 ಗುಂಡು ಮಗು. ಅವರೆಂದರೆ ಅಕ್ಕಮಹಾದೇವಮ್ಮ, ಇಂಧ್ರಾಣಿ, ರೇಣುಕಾ, ಮಹದೇವಸ್ವಾಮಿ ಎಂದು ನುಡಿಯುತ್ತೇನೆ. 2 ನೇ ಪ್ರತಿವಾದಿಯ ಹೆಸರು ಸುಮತಿ ಎಂದು ನಮೂದಾಗಿದೆ ಎಂದರೆ ಆಕೆಯ ಹೆಸರು ರೇಣುಕಾ ಎಂದು ನುಡಿಯುತ್ತೇನೆ. ಸುಮತಿ ಎಂಬ ಹೆಸರನ್ನು ದಾವೆ ಹಾಕುವಾಗಲೇ ಸೇರಿಸಿದ್ದೆವು ಹಾಗು ರೇಣುಕಾ ಎಂಬುದನ್ನು ಇತ್ತೀಚೆಗೆ ಸೇರಿಸಿರುವುದು ಎಂದರೆ ಮೊದಲಿಗೆ ಸುಮತಿ ಎಂದು ಹೆಸರಿತ್ತು ಹಾಗು ನಂತರ ಓಟರ್ ಲಿಸ್ಟ್ ನಲ್ಲಿ ರೇಣುಕಾ ಎಂದು ತಿದ್ದುಪಡಿ ಮಾಡಿದರು ಎಂದು ನುಡಿಯುತ್ತೇನೆ. ಆರೀತಿ ತಿದ್ದುಪಡಿಯನ್ನು ಅಂಗನವಾಡಿ ಟೀಚರ್ ಗಳ ಮಾಹಿತಿಯನ್ನು ಆಧರಿಸಿ ತಿದ್ದುಪಡಿಮಾಡುತ್ತಾರೆ ಎಂದರೆ ಇರಬಹುದು. ಸಾಕ್ಷಿ ಸ್ವತಃ ನುಡಿಯುತ್ತಾರೆ ಆದರೆ ಸುಮತಿ ಯಿಂದ ರೇಣುಕಾ ಎಂದು ತಿದ್ದುಪಡಿಯನ್ನು ಮಾಡುವ ಸಮಯದಲ್ಲಿ ನಾನು ಹಾಜರು ಇರಲಿಲ್ಲ ಹಾಗು ಆರೀತಿ ತಿದ್ದುಪಡಿಗು ಹಾಗು ನನಗು ಯಾವುದೇ ಸಂಬಂಧವಿಲ್ಲ. ಸದರಿ ತಿದ್ದುಪಡಿಬಗ್ಗೆ ನನಗೆ ಖುದ್ದುಮಾಹಿತಿ ಇಲ್ಲ. ಇತ್ತೀಚೆಗೆ ನಾನು ಓಟರ್ ಲಿಸ್ಟ್ ಪಡೆದುಕೊಂಡಾಗ ಆರೀತಿ ತಿದ್ದುಪಡಿ ಮಾಡಿಕೊಂಡಿರುವುದು ಗೊತ್ತಾಯಿತು. ನಾವು ನೀಲಕಂಠದೇವರ ಮಕ್ಕಳಲ್ಲವಾದ್ದರಿಂದ ಪ್ರತಿವಾದಿಗಳ ಹೆಸರು ಕುರಿತು ನಮಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ನನ್ನ ಗಂಡ ಊರು ಮಡುವಿನಹಳ್ಳಿ,. ನನ್ನ ಅಕ್ಕನ ಗಂಡನ ಊರು ಕಟ್ಟೆ ಹುಣಸೂರು. ನನ್ನ ಮದುವೆ ಮಡುವಿನಹಳ್ಳಿಯಲ್ಲಿ ಆಗಿತ್ತು. ಸಾಕ್ಷಿ ಸ್ವತಃ ನುಡಿಯುತ್ತಾರೆ ನನ್ನ ತಂದೆಯೇ ನಿಂತು ಮದುವೆಮಾಡಿಸಿದ್ದರು. ನನ್ನ ಮದುವೆಯ ಕಾರ್ಡ್ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆಯೇ ಎಂದು ಗೊತ್ತಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ನನ್ನ ಮದುವೆ ಕಾಲದ ಪೊಟೋ ಕೂಡ ಇದೆ. ಇದುವರೆವಿಗೂ ಸದರಿ

ಪೊಟೋಗಳು ಹಾಗು ಕಾರ್ಡನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ. ನನ್ನ ಮದುವೆ ಆಮಂತ್ರ ಣ ಪತ್ರಿಕೆಯಲ್ಲಿ ನಿಂಗಪ್ಪನ ಮೊಮ್ಮಗಳು ಹಾಗು ಕೆಂಪದೇವಪ್ಪನ ಮಗಳು ಎಂದು ನಮೂದಾಗಿರುವುದು ಎಂದರೆ ಸರಿಯಲ್ಲ. ನೀಲಕಂಠದೇವರ ಹೆಸರು ಅದರಲ್ಲಿ ಇಲ್ಲವಾದ್ದರಿಂದ ಆ ದಾವೆಯನ್ನು ಈ ಕೊರ್ಟಿನಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಈಗ ವಿಜ್ಞಾನ ಬಹಳ ಮುಂದುವರಿದಿರುವುದರಿಂದ ಬೇಕಾದಂತೆ ಪತ್ರ ಗಳನ್ನು ಹಾಗು ಪೊಟೋಗಳನ್ನು ಮುದ್ರಿಸಬಹುದು ಎಂದರೆ ಸರಿಯಲ್ಲ.

ನನ್ನ ಅಕ್ಕ ನಾಗಮ್ಮಳ ಮದುವೆ ಬೇಲುಕುಪ್ಪೆ ದೇವಸ್ಥಾನದಲ್ಲಿ ಆಗಿತ್ತು. ಆಕೆಗೆ ಮದುವೆ ಮಾಡುವ ಸಮಯ ಕಾರ್ಡು ಮಾಡಿಸಿಲ್ಲ ಹಾಗು ಪೊಟೋತೆಗೆಸಿಲ್ಲ, ಕೇವಲ ಲಗ್ನಪತ್ರಿಕೆಯನ್ನು ಬರೆಸಿ ಮದುವೆಮಾಡಿಸಲಾಗಿತ್ತು. ಹುಲ್ಲಹಳ್ಳಿಯಲ್ಲಿ ನಂದಿಬಸಪ್ಪನ ಛತ್ರ ಇತ್ತು ಎಂದರೆ ಗೊತ್ತಿಲ್ಲ. ಹುಲ್ಲಹಳ್ಳಿ ಮಠ ಗೊತ್ತು. ಆ ಮಠದಲ್ಲಿ ನಾಗಮ್ಮಳ ಮದುವೆಯಾಗಿದ್ದು ಎಂದರೆ ಸರಿಯಲ್ಲ. ನಿಂಗಪ್ಪನ ಮೊಮ್ಮಗಳು ಹಾಗು ಕೆಂಪದೇವಮ್ಮನ ಮಗಳು ಎಂದು ನಾಗಮ್ಮಳ ಲಗ್ನಪತ್ರಿಕೆಯಲ್ಲಿ ನಮೂದು ಇರುವುದರಿಂದ ಆ ದಾಕಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾಗೇಂದ್ರಮ್ಮಳಿಂದ ನೀಲಕಂಠದೇವರು ವಿವಾಹ ವಿಚ್ಛೇದನ ಪಡೆದಿದ್ದರೇ ಎಂದು ಕೇಳಿದರೆ ಹೇಳಲು ನನಗೆ ಗೊತ್ತಿಲ್ಲ. ನಾಗೇಂದ್ರಮ್ಮಳನ್ನು ನಾನು ನೋಡಿದ್ದೇನೆ. ಆಕೆಗೆ ಈಗ ಸುಮಾರು 85 ವರ್ಷ ವಯಸ್ಸಾಗಿದೆ ಎಂದರೆ ಇರಬಹುದು. ನಾಗೆಂದ್ರಮ್ಮ ಹಾಗು ನೀಲಕಂಠದೇವರು ದಂಪತಿಗಳಿಗೆ ಮಕ್ಕಳು ಜನಿಸಿರುವುದರಿಂದ ನೀಲಕಂಠದೇವರು ಕೇಂಪದೇವಮ್ಮಳನ್ನು 2 ನೇ ಮದುವೆಯಾಗುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.47 , 48 ನ್ನು ನೀಲಕಂಠದೇವರು ಖರೀದಿ ಮಾಡಿದ್ದಾರೆ ಎಂದು ತೋರಿಸುವ ಖರೀದಿ ಪತ್ರವನ್ನು ನಾನು ನೋಡಿದ್ದೇನೆಯೇ ಎಂದು ಕೇಳಿದರೆ ವೀಲಿನಲ್ಲಿ ಬರೆದಿರುವುದು ಗೊತ್ತು ಹೊರತು ಖರೀದಿ ಪತ್ರ ನೋಡಿಲ್ಲ ಎಂದು ನುಡಿಯುತ್ತೇನೆ ಆರೀತಿ ಅವರು ಯಾವುದೇ ವೀಲು ಬರೆದಿಲ್ಲ ಎಂದರೆ ಸರಿಯಲ್ಲ. ಆರೀತಿ ವೀಲು ಬರೆಯುವ ಉದ್ದೇಶ ಕೂಡ ಅವರಿಗೆ

ಇರಲಿಲ್ಲ ಎಂದರೆ ಸರಿಯಲ್ಲ. ನಾನು ನೀಲಕಂಠದೇವರು ರವರು ವಾರಸುದಾರರು ಎಂದು ವಾರಸು ಪತ್ರವನ್ನು ನ್ಯಾಯಾಲಯದಿಂದ ಪಡೆದುಕೊಂಡಿದ್ದೇವೆಯೇ ಎಂದು ಕೇಳಿದರೆ ಇಲ್ಲ ಎಂದು ನುಡಿಯುತ್ತೇನೆ. ಸಾಕ್ಷಿ ಸ್ವತಃ ನುಡಿಯುತ್ತಾರೆ ನಮ್ಮ ಎಲ್ಲಾ ದಾಖಲೆಗಳಲ್ಲೂ ನೀಲಕಂಠದೇವರ ಹೆಸರಿದೆ.

ನಾಗಮ್ಮಳು ವ್ಯವಸಾಯ ಮಾಡುತ್ತಾರೆ. ಒ ಎಸ್ 58/2004 ನ್ನು ನಾಗೇಂದ್ರಮ್ಮ ಹಾಗು ನಂಜುಂಡಶಿವಯೋಗಿಗಳು ದಾಖಲಿಸಿದ್ದರು ಎಂದರೆ ನಿಜ. ಆ ಕೇಸಿನಲ್ಲಿ ನನ್ನ ತಾಯಿಯ ವಿಚಾರಣೆ ಆಗಿದೆ ಎಂದರೆ ನಿಜ. ಆ ದಾವೆಯಲ್ಲಿ ನನ್ನ ತಾಯಿ ಏನು ಹೇಳಿದ್ದಾರೆ ಎಂದು ನಾನು ಓದಿ ತಿಳಿದುಕೊಂಡಿದ್ದೇನೆ ಎಂದರೆ ನಿಜ. ಅದರಲ್ಲಿ ನನ್ನ ತಾಯಿ ಆಕೆಯ ಮದುವೆ ಮಡುವಿನಹಳ್ಳಿಯಲ್ಲಿ ಆಯಿತು ಎಂದು ಹೇಳಿದ್ದಾರೆ ಎಂದರೆ ಆರೀತಿ ಹೇಳಿಲ್ಲ ಎಂದು ನುಡಿಯುತ್ತೇನೆ. ಮದುವೆಯಾಗುವ ಸಮಯ ಯಾರೆಲ್ಲಾ ಹಾಜರಿದ್ದರು ಎಂದು ಗೊತ್ತಿಲ್ಲ ಎಂದು ನನ್ನ ತಾಯಿ ಸಾಕ್ಷಿ ನುಡಿದಿದ್ದಾರೆ ಎಂದರೆ ಆರೀತಿ ನುಡಿಯಲು ಸಾಧ್ಯವಿಲ್ಲ ಎಂದು ನುಡಿಯುತ್ತೇನೆ. ನನ್ನ ತಾಯಿಯನ್ನು ಮದುವೆಯಾಗುವ ಸಮಾಯ ನೀಲಕಂಠದೇವರು ಹಾಗು ನಾಗೇಂದ್ರಮ್ಮಳಿಗೆ ಮಕ್ಕಳು ಜನಿಸಿದ್ದರೆ ಎಂದು ಕೇಳಿದರೆ ಹೇಳಲು ಗೊತ್ತಿಲ್ಲ. ಆರೀತಿ ವಿವಾದಿತ ಮದುವೆ ಸಮಯ ನೀಲಕಂಠದೇವರು ಹಾಗು ನಾಗೇಂದ್ರಮ್ಮ ದಂಪತಿಗೆ ಮಕ್ಕಳು ಇದ್ದರು ಎಂದು ನನ್ನ ತಾಯಿ ಸಾಕ್ಷಿ ಹೇಳಿಕೆಯಲ್ಲಿ ನುಡಿದಿದ್ದಾರೆ ಎಂದರೆ ಗೊತ್ತಿಲ್ಲ. ನಾಗೇಂದ್ರಮ್ಮ ಹಾಗು ಆಕೆಯ ಮಕ್ಕಳನ್ನು ಇದುವರೆಗೂ ನಾವು ಹೋಗಿ ಮಾತನಾಡಿಸಿಲ್ಲ ಎಂದರೆ ಅವರು ನಮ್ಮ ಮನೆಗೆ ಬರುವುದಿಲ್ಲ ಹಾಗು ನಾವು ಅವರ ಮನೆಗೆ ಹೋಗುವುದಿಲ್ಲ ಹಾಗು ನಮ್ಮ ಮನೆಯಲ್ಲಿ ನನ್ನ ತಂದೆ ಇದ್ದಾಗ ಅವರು ಕೆಲವೊಮ್ಮೆ ಬಂದು ಹೋಗುತ್ತಿದ್ದರು ಎಂದು ನುಡಿಯುತ್ತೇನೆ. ನನಗಿಂತ ಮಹದೇವಸ್ವಾಮಿಯು ಯಸ್ಸಿನಲ್ಲಿ 1 ವರ್ಷ 6 ತಿಂಗಳು ಹಿರಿಯನು ಎಂದರೆ ನಿಜ. ಇದುವರೆಗೂ ನಾನು ನಾಗೇಂದ್ರಮ್ಮಳನ್ನು ಮಾತನಾಡಿಸಿಲ್ಲ. ಆಸ್ತಿ ಬಗ್ಗೆ ಆಕೆಯನ್ನು ಮಾತನಾಡಿಸಿಲ್ಲ. 1988 ರಲ್ಲಿ ನಾನು 16 ವರ್ಷವಯಸ್ಸಿನವಳಾಗಿದ್ದೆ. ಸದರಿ

ಇಸವಿಯಲ್ಲಿ ಏನೇನು ಆಯಿತು ಎಂದು ಹೇಳಲು ನನಗೆ ಸಾಧ್ಯವಿಲ್ಲ ಎಂದರೆ ನಿಜ. ವೀಲುಪ್ರಕಾರ ಖಾತೆ ಮಾಡಿ ಎಂದು ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದೇವೆ. ಅದರ ಕೇಸ್ ನಂಬರ್ ಹೇಳಲು ಗೊತ್ತಿಲ್ಲ. ಆರೀತಿ ದಾವೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ವೀಲು ಬರೆಯುವ ಮೊದಲು ಬೇರೆ ಯಾರ ಬಳಿಯಾದರೂ ಹೇಳಿಕೊಂಡಿರುವುದು ನನಗೆ ಖುದ್ದು ಗೊತ್ತೇ ಎಂದು ಕೇಳಿದರೆ ಗೊತ್ತು , ವೀಲಿಗೆ ಸಹಿಮಾಡಲು ಕರೆದವರ ಬಳಿ ಹೇಳಿದ್ದರು ಎಂದು ನುಡಿಯುತ್ತೇನೆ. ಆರೀತಿ ಸಹಿಮಾಡಿದ ವ್ಯಕ್ತಿ ನಿಂಗಪ್ಪನಿಗೆ ಸ್ನೇಹಿತ ಎಂದರೆ ಸರಿಯಲ್ಲ. ಆರೀತಿ ಹೇಳಿದ್ದನ್ನು ನನ್ನ ಬಳಿ ನಮ್ಮ ಮನೆಯಲ್ಲಿ ಹೇಳಿದ್ದರು. ಆರೀತಿ ಹೇಳುವಾಗ ನನಗೆ ಮದುವೆಯಾಗಿರಲಿಲ್ಲ. ಆ ಸಮಯ ನನಗೆ ಸುಮಾರು 17 ವರ್ಷ ವಯಸ್ಸಾಗಿತ್ತು. ನಾನು ಹೇಳುವಂತೆ ವೀಲುನಾಮೆಯಾಗಿಲ್ಲ ಎಂದರೆ ಸರಿಯಲ್ಲ. ಅವರ ಆಸ್ತಿಯನ್ನು ಹೊಡೆದುಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿರುವುದು ಎಂದರೆ ಸರಿಯಲ್ಲ.

ನೀಲಕಂಠದೇವರು ತಕರಾರು ಸಲ್ಲಿಸುವಾಗ ಅವರ ಮಕ್ಕಳಾದ ನಾಗಮ್ಮ ಹಾಗು ಮಂಜುಳಾರವರನ್ನು ದಾವೆಯಲ್ಲಿ ಸೇರಿಸಿಲ್ಲ ಎಂದು ತಕರಾರಿನಲ್ಲಿ ನಮೂದಿಸಲು ತೊಂದರೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನೀಲಕಂಠದೇವರು ಜೀವಂತ ಇರುವವರೆಗೂ ನಮ್ಮನ್ನು ಅವರ ಮಕ್ಕಳು ಎಂದು ಎಲ್ಲೂ ಒಪ್ಪಿ ಕೊಂಡಿಲ್ಲ ಎಂದರೆ ಸರಿಯಲ್ಲ. ನಾವು ನೀಜವಾಗಿಯೂ ಅವರಿಗೆ ಜನಿಸಿದ್ದರೆ ಒ ಎಸ್ 124/1988 ರಲ್ಲಿ ತಕರಾರು ಸಲ್ಲಿಸುವಾಗ ನಮ್ಮ ಬಗ್ಗೆ ನೀಲಕಂಠದೇವರು ಉಲ್ಲೇಖ ಮಾಡುತ್ತಿದ್ದರು ಎಂದರೆ ಸರಿಯಲ್ಲ.

ದಾವಾ ಆಸ್ತಿಗಳ ಬಗ್ಗೆ ಸಂಪೂರ್ಣ ತಿಳುವಳಿಕೆ ಇದೆಯೇ ಎಂದು ಕೇಳಿದರೆ ಇದೆ ಎಂದು ನುಡಿಯುತ್ತೇನೆ. ಆ ಸರ್ವೆ ನಂಬರ್ ಹೇಳಲು ಗೊತ್ತಿಲ್ಲ. ಯಾವ ಸರ್ವೆ ನಂಬರ್ ಎಷ್ಟು ವಿಸ್ತೀರ್ಣ ಎಂದು ಹೇಳಲು ನಾನು ಅಷ್ಟು ವಿದ್ಯಾಭ್ಯಾಸ ಮಾಡಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಯಾವ ಸರ್ವೆ ನಂಬರ್ ನಲ್ಲಿ ಎಷ್ಟು ವಿಸ್ತೀರ್ಣ ಎಂದು ಹೇಳಲು ಸಾಧ್ಯವಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ದಾಖಲೆಗಳನ್ನು

ಹಾಜರುಪಡಿಸಿದ್ದೇನೆ. ದಾವಾ ಆಸ್ತಿಗಳ ಚಕ್ಕುಬಂದಿ ಹೇಳಲು ಗೊತ್ತಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ನಾನು ಆ ಜಮೀನುಕಡೆ ಹೋಗಿಲ್ಲ. ಆ ಜಮೀನುಗಳು ಎಲ್ಲಿವೆ ಎಂದು ಹೇಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಅಲ್ಲಿ 3 ನೇ ಹೊಲ ಎಂಬಲ್ಲಿ ಆ ಜಮೀನುಗಳು ಇವೆ. ಆ 3 ನೇ ಹೊಲ ಎಂಬ ಜಮೀನಿನ ಬಗ್ಗೆ ಸರ್ವೆ ನಂಬರ್, ವಿಸ್ತೀರ್ಣ ಗೊತ್ತಿಲ್ಲ. ಮಹದೇವಸ್ವಾ ಮಿಯೇ ಅದನ್ನು ಉಳುಮೆ ಮಾಡುತ್ತಿದ್ದರು. ದಾವೆಯಲ್ಲಿ ಇರುವ ಅಷ್ಟೂ ವಿಸ್ತೀರ್ಣದ ಸ್ವತ್ತುಗಳನ್ನು ಮಹದೇವಸ್ವಾ ಮಿಯೇ ಉಳುಮೆ ಮಾಡುತ್ತಿರುವುದೇ ಎಂದು ಕೇಳಿದರೆ ಎಲ್ಲವನ್ನೂ ಮಾರಾಟ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತೇನೆ.

ದಾವೆಯಲ್ಲಿ ಹಾಜರುಪಡಿಸಿರುವ ದಾಖಲಾತಿಗಳನ್ನು ದಾವೆ ದಾಖಲಿಸುವ 3 ವರ್ಷಗಳ ಹಿಂದೆ ಪಡೆದುಕೊಂಡಿದ್ದೇನೆ. ನಿ ಪಿ 4 ನ್ನು 2004 ರಲ್ಲಿ ಪಡೆದುಕೊಂಡಿರುವುದು ಎಂದರೆ ಸರಿಯಲ್ಲ. ನಿ ಪಿ 1 ರಿಂದ 6 ನ್ನು ನ್ಯಾಯಾಲಯಕ್ಕೆ ನಾವೇ ನೀಡಿರುವುದು ಎಂದರೆ ಇರಬಹುದು. ಇತರೆ ಆರ್ ಟಿ ಸಿ ಗಳನ್ನು 2011 ರಲ್ಲಿ ಪಡೆದುಕೊಂಡಿರುವುದು ಎಂದರೆ ಸರಿಯಲ್ಲ. ಆರೀತಿ ಪಡೆದುಕೊಂಡ ನಂತರ ಯಾರ ಹೆಸರಿನಲ್ಲಿ ಖಾತೆ ಇದೆ ಎಂದು ಗೊತ್ತಾಗಿತ್ತು ಎಂದರೆ ನಿಜ. 1995 – 96 ರಲ್ಲಿ ಸದರಿ ನಿ ಪಿ 1 ರ ಖಾತೆಯಾಗಿದೆ ಎಂದರೆ ಗೊತ್ತಿಲ್ಲ.

6 ಮತ್ತು 7 ನೇ ಪ್ರತಿವಾದಿ ಮಲ್ಲಣ್ಣ ಹಾಗು ಶ್ರೀಕಂಠ ಮೂರ್ತಿ ನಮ್ಮ ಊರಿನವರು ಎಂದರೆ ನಿಜ. ಅವರ ಮನೆ ನಮ್ಮ ಮನೆಇರುವ ರಸ್ತೆಯಲ್ಲಿಯೇ ಇದೆ. ಮಲ್ಲಣ್ಣ ಹಾಗು ಶ್ರೀಕಂಠ ಮೂರ್ತಿ ಜೊತೆ ನಮಗೆ ಜಗಳ ಹಾಗು ವೈಮನಸ್ಸು ಇಲ್ಲ ಎಂದರೆ ನಿಜ. ಸಾಕ್ಷಿ ಸ್ವತಃ ನುಡಿಯುತ್ತಾರೆ ಮಹದೇವಸ್ವಾಮಿ ಮಾರಾಟ ಮಾಡಿದ್ದನ್ನು ಅವರು ಖರೀದಿ ಮಾಡಿದ್ದಾರೆ. ಮಲ್ಲಣ್ಣ ಹಾಗು ಶ್ರೀಕಂಠ ಮೂರ್ತಿ ನಮ್ಮ ಮನೆಗೆ ಬರುತ್ತಿದ್ದರು ಹಾಗು ನಾವು ಅವರ ಮನೆಗೆಹೋಗುತ್ತಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಅವರ ಪಾಡಿಗೆ

ಅವರಿದ್ದರು ಹಾಗು ನಮ್ಮ ಪಾಡಿಗೆ ನಾವಿದ್ದೆವು. ಮಲ್ಲಣ್ಣರವರಿಗೆಜಮೀನು ಮಾರಾಟ ಮಾಡಿದ್ದು ನನಗೆ ಯಾವಾಗ ಗೊತ್ತಾಗಿದ್ದು ಎಂದರೆ ನನ್ನ ತಂದೆ ಇದ್ದಾಗಲೇ ಗೊತ್ತಾಗಿತ್ತು ಎಂದು ನುಡಿಯುತ್ತೇನೆ. ಯಾವ ಸರ್ವೆ ನಂಬರ್ ಅನ್ನು ಅವರಿಗೆ ಮಾರಾಟ ಮಾಡಿದ್ದು ಎಂದು ಹೇಳಲು ಗೊತ್ತಿಲ್ಲ. ಸದರಿ ಆಸ್ತಿಯಲ್ಲಿ ನಮಗೂ ಹಕ್ಕಿದೆ ಹಾಗು ಆದ್ದರಿಂದ ಖಾತೆ ಮಾಡಬಾರದು ಎಂದು ತಕರಾರು ಸಲ್ಲಿಸಲು ನಮಗೆ ತೊಂದರೆ ಇತ್ತೆ ಎಂದು ಕೇಳಿದರೆ ನಮ್ಮ ತಂದೆ ಆ ಸಮಯ ನಮಗೂ ಕೂಡ ಸರ್ವೆ ನಂ.47 ಮತ್ತು 48 ನ್ನು ಕೊಡುತ್ತೇವೆ ಎಂದು ಹೇಳಿದ್ದರಿಂದಾಗಿ ತಕರಾರು ಮಾಡಬೇಡಿ ಎಂದು ಹೇಳಿದ್ದರಿಂದಾಗಿ ಸುಮ್ಮನಿದ್ದೆವು ಎಂದು ನುಡಿಯುತ್ತೇನೆ. ಆರೀತಿ ಹೇಳುವಾಗ ನಮ್ಮನ್ನು ಬಿಟ್ಟು ಬೆರೆ ಯಾರಾದರೂ ಇದ್ದರೆ ಎಂದು ಕೇಳಿದರೆ ನಾವು ಮನೆಯಲ್ಲೆ ಕೇಳಿದ್ದು ಹಾಗು ಬೇರೆಯಾರು ಇರಲಿಲ್ಲ ಎಂದು ನುಡಿಯುತ್ತೇನೆ. ನೀಲಕಂಠದೇವರು ಆರೀತಿ ಹೇಳಿರಲಿಲ್ಲ ಎಂದರೆ ಸರಿಯಲ್ಲ.

ಶ್ರೀಕಂಠಮೂರ್ತಿಗೆ ಯಾವ ಸರ್ವೆ ನಂಬರ್ ನ ಎಷ್ಟು ವಿಸ್ತೀರ್ಣದ ಜಮೀನನ್ನು ಮಾರಾಟ ಮಾಡಿರುವುದು ಎಂಬುದನ್ನು ಹೇಳಲು ಸಾಧ್ಯವಿಲ್ಲ. 5 ಮತ್ತ 8 ನೇ ಪ್ರತಿವಾದಿಗೆ ಯಾವ ಸರ್ವೆ ನಂಬರ್ ನ ಎಷ್ಟು ವಿಸ್ತೀರ್ಣದ ಜಮೀನನ್ನು ಮಾರಾಟ ಮಾಡಿರುವುದು ಎಂಬುದನ್ನು ಹೇಳಲು ಸಾಧ್ಯವಿಲ್ಲ. ಎಂ ಆರ್ ನಂ.45 ಮತ್ತು 47/95-96 ರಂತೆ ಮಹದೇವಸ್ವಾ ಮಿಗೆ ಆಗಿರುವ ಖಾತೆಯನ್ನು ನಾನು ಇದುವರೆವಿಗೂ ಎಲ್ಲೂ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ಖಂದಾಯ ಇಲಾಖೆಯಲ್ಲಿ ಆರೀತಿ ಪ್ರಶ್ನಿಸಿಲ್ಲ.

ನಿ ಪಿ 3 ರಲ್ಲಿ ಮಹದೇವಪ್ಪ ಬಿನ್ ಮಹದೇವಪ್ಪ ರವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ ಪಿ 4 ರಲ್ಲಿರುವ ಸರ್ವಮಂಗಳ ಹಾಗು ಮಲ್ಲಪ್ಪರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ದಾವೆಯ ಶಿರೋನಾಮೆಯಲ್ಲಿ ಈಗ ಓದಿ ಹೇಳಿರುವಲ್ಲಿ ಸರ್ವಮಂಗಳ ರವರ ಹೆಸರು ಇಲ್ಲ ಎಂದರೆ ನಿಜ. 2001-02 ನೇ ಸಾಲಿನಲ್ಲಿ ಸರ್ವಮಂಗಳ ರವರ ಹೆಸರಿನಲ್ಲಿ

ಆಗಿರುವ ಮುಟೇಷನ್ ಆದೇಶವನ್ನು ನಾವು ಇದುವರೆವಿಗೂ ಪ್ರಶ್ನೆ ಮಾಡಿಲ್ಲ ಎಂದರೆ ಕೊರ್ಟಿನಲ್ಲಿ ಪ್ರಶ್ನೆ ಮಾಡಿದ್ದೇವೆ ಎಂದು ನುಡಿಯುತ್ತೇನೆ. ಆರೀತಿ ಕಂದಾಯ ಇಲಾಖಲೆಯಲ್ಲಿ ಪ್ರಶ್ನೆ ಮಾಡಿಲ್ಲ.

ನಿ ಪಿ 33 ರಲ್ಲಿ ಕಾಣಿಸಿರುವ ಸಾದನಾ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಗೊತ್ತಿಲ್ಲ. ಈಗ ಬೆಂಗಳೂರಿನಲ್ಲಿ ನೆಡೆಯುತ್ತಿರುವ ದಾವೆಯಲ್ಲಿ ರಾಜಿ ಮಾಡಿಕೊಳ್ಳಲು ಒತ್ತಡ ಹೇರಲು ಹಾಗು ಸದರಿ ದಾವೆಗೆ ಅನುಕೂಲವಾಗಲು ನಾವು ಈ ದಾವೆಯನ್ನು ದಾಖಲಿಸಿದ್ದು ಎಂದರೆ ಸರಿಯಲ್ಲ. ಆದ್ದರಿಂದಲೇ ಪೂರ್ತಿ ವಿವರ ಹೇಳಿಲ್ಲ ಹಾಗು ಅಸ್ಪಷ್ಟ ಮಾಹಿತಿಯನ್ನು ನೀಡಿದ್ದು ಎಂದರೆ ಸರಿಯಲ್ಲ. ದಾವಾ ತಪಶೀಲಿನಲ್ಲಿ ಕಾಣಿಸಿರುವ ಬಹುತೇಕ ಆಸ್ತಿಗಳು ಈಗ ಅಸ್ತಿತ್ವದಲ್ಲಿ ಇಲ್ಲ ಹಾಗು ಮಾರಾಟವಾಗಿಹೋಗಿವೆ ಎಂದರೆ ಅವರು ಮಾರಾಟ ಮಾಡಿದ್ದು ನಿಜ ಎಂದು ನುಡಿಯುತ್ತೇನೆ. ನಿ ಪಿ 35 ರಲ್ಲಿ ಇರುವ ಭುವನ್ ಹಾಗು ಪವನ್ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಅವರು ನಮಗೆ ಗೊತ್ತಿಲ್ಲ ಎಂದು ನುಡಿಯುತ್ತೇನೆ. ಅವರಿಗೆ ಯಾರು ಸ್ವತ್ತು ಮಾರಾಟ ಮಾಡಿದ್ದು ಎಂದು ಗೊತ್ತಿಲ್ಲ. ನಿ ಪಿ 35 ನ್ನು ಉಪನೋಂದಣಿ ಕಛೇರಿಯಿಂದ ಯಾರು ಪಡೆದುಕೊಂಡಿದ್ದು ಎಂದು ಗೊತ್ತಿಲ್ಲ. ನಿ ಪಿ 1 ರಿಂದ 36 ದಾಖಲೆಯಲ್ಲಿ ಏನಿದೆ ಎಂದು ಸಂಪೂರ್ಣ ಮಾಹಿತಿ ನನಗೆ ಇಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್

ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.